ಶೈಕ್ಷಣಿಕ ಕ್ಷೇತ್ರದಲ್ಲಿ ಎರಡು ವಿಶ್ವವಿದ್ಯಾನಿಲಯಗಳು ಬರುವಲ್ಲಿ ಸರ್ಕಾರಿ ಕನ್ನಡ ಶಾಲೆಗಳ ಪರಿಸ್ಥಿತಿ ಏನಿದೆ ಎಂದರೆ ಅಲ್ಲಿ ಹೋಗಲು ಸಾಧ್ಯವಿಲ್ಲ. ಇವೊತ್ತು ಅವು ದನದ ಕೊಟ್ಟಿಗೆ ಹಾಗಿವೆ.

ಅಧ್ಯಕ್ಷರು :- ಅವರು ಟ್ಯೂಷನ್ ವಿಚಾರವಾಗಿ ಪ್ರಶ್ನೆ ಹಾಕಿದ್ದಾರೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ಸರ್ಕಾರಿ ಶಾಲೆಗಳು.....

(ಗೊಂದಲ)

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್ :- ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸರಿಯಾಗಿ ಕೊಠಡಿಗಳನ್ನು ಒದಗಿಸಿದರೆ ಮಕ್ಕಳು ಬರಲಿಕ್ಕೆ ಸಾಧ್ಯವಾಗುತ್ತದೆ. ಶಾಲೆಗಳ ಪರಿಸ್ಥಿತಿ ಚೆನ್ನಾಗಿಲ್ಲದ ಕಾರಣ ಜನರು ಪ್ರೈವೇಟ್ ಕಾನ್ವೆಂಟ್‌ಗೆ ಹೋಗುವ ಅವಶ್ಯಕತೆಯಾಗಿದೆ.

ಅಧ್ಯಕ್ಷರು :- ನೀವು ಡ್ಯಾನಲ್‌ನಲ್ಲಿ ಬೇರೆ ಇದ್ದೀರಿ, ನೀವು ಅಧ್ಯಕ್ಷರಾಗುವವರು ಉಪ ಪ್ರಶ್ನೆಯನ್ನು ಶಾಸಕರು ಬಿಟ್ಟು ಭಾಷಣ ಮಾಡಿದರೆ ಹೇಗೆ? ಎಲ್ಲಾ ಸುಧಾರಿಸುತ್ತಾರೆ, ಏನೇನು ಮಾಡುತ್ತೇವೆಂದು ಅವರು ಹೇಳಿದ್ದಾರಲ್ಲಾ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು :-

ಶ್ರೀ ಎಂ. ಸಿ. ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಕ್ಕೆ ಸಚಿವರು) :- ಮಾನ್ಯ ಸಭಾಧ್ಯಕ್ಷರೇ, 24 ನೇ ಜುಲೈ, 1986 ರಂದು 14 ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 77 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ :- ಗ್ರಾಮ ಪಂಚಾಯತಿಯ ಕಟ್ಟಡದ ಹಣ ದುರುಪಯೋಗವಾಗಿ ಅರ್ಧಕ್ಕೆ ನಿಂತ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 731 (1530)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರೇಕೆರೂರು ತಾಲ್ಲೂಕು ಸಾಲೇನಹಳ್ಳಿ ಗ್ರಾಮ ಪಂಚಾಯ್ತಿಯ ಕಟ್ಟಡವನ್ನು ಕಟ್ಟಿಸಲು ಎಂದು ಪ್ರಾರಂಭಿಸಲಾಯಿತು?

ಆ) ಇದು ಈಗ ಯಾವ ಹಂತದಲ್ಲಿದೆ? ಇದುವರೆಗೆ ಖರ್ಚು ಮಾಡಿದ ಹಣ ಎಷ್ಟು?

ಇ) ಇದರಲ್ಲಿ ಹಣ ದುರುಪಯೋಗವಾಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ದುರುಪಯೋಗವಾದ ಹಣ ಎಷ್ಟು?

ಈ) ಹಣ ದುರುಪಯೋಗಕ್ಕೆ ಕಾರಣರು ಯಾರು? ಏನು ಕ್ರಮ ತೆಗೆದು ಕೊಳ್ಳಲಾಗಿದೆ?